ಡಿ.ಡಬ್ಲೂಃ- 1

ದಿನಾಂಕಃ 26.05.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ- ಪಿರ್ಯಾದಿ ಪರವಾಗಿ Sri. MHB, ವಕೀಲರಿಂದ

1. ಕಳೆದ ಮೇ-2025 ರಿಂದ ಬ್ಯಾಂಕ ಆಪ ಇಂಡಿಯಾ ಹಾವೇರಿ ಶಾಖೆಯಲ್ಲಿ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಗದಿಗೆಪ್ಪಾ ಎನ್ನುವವರಿಗೆ ಬ್ಯಾಂಕನಿಂದ ಚೆಕ ಬುಕ ವಿತರಿಸುವ ಕಾಲಕ್ಕೆ ರೆಜಿಸ್ಟರನಲ್ಲಿ ಸಹಿ ಪಡೆದಿದ್ದಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ದಾಖಲೆ ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಗದಿಗೆಪ್ಪಾ ಎನ್ನುವವರು ಚೆಕ ಪುಸ್ತಕ ಕಳೆದು ಹೋದ ಬಗ್ಗೆ ಮಾಹಿತಿ ಬ್ಯಾಂಕಿಗೆ ನೀಡಿದ್ದಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ದಾಖಲೆ ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ.

2. ನಿಪಿ.1 ನಮ್ಮ ಬ್ಯಾಂಕಿನ ಶಾಖೆಗೆ ಸಂಬಂಧಿಸಿದ್ದು ಎಂದರೆ ಸರಿ. ಬ್ಯಾಂಕಿಗೆ ಚೆಕ್ಕು ನಗದೀಕರಣಕ್ಕೆ ಬಂದಾಗ ಖಾತೆದಾರರ ವಿವರಗಳನ್ನು ಪರಿಶೀಲಿಸಿ ಕ್ಲಿಯರನ್ಸಗೆ ಕಳುಹಿಸಿಕೊಡುತ್ತೇವೆ ಎಂದರೆ ಸರಿ. ನಿಪಿ.1 ನಗದೀಕರಣಕ್ಕೆ ಹಾಜರುಪಡಿಸಿದಾಗ ಖಾತೆದಾರರ ವಿವರಗಳನ್ನು ಎಲ್ಲಿಯು ನಮೂದಿಸಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ದಾಖಲೆ ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓದಿ. ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಲಕ್ಷ್ಮೇಶ್ವರ.